# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ:
director.ahr.kptcl@gmail.com

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521
ಅಧಿಕೃತ ಕಛೇರಿ ವಿಳಾಸ: ನಿಗಮ ಕಾರ್ಯಾಲಯ, ಕಾವೇರಿಭವನ, ಕೆ.ಜಿ.ರಸ್ತೆ, ಬೆಂಗಳೂರು-560009.

ಕವಿಪ್ರನಿನಿ/ವ್ಯ(ಔಬಾ)/ಹಿಸ7/70015/17-18
ಲಗತ್ತು:- ಪತ್ರದಲ್ಲಿರುವಂತೆ

ದಿನಾಂಕ: 27 APR 2018

ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ),
ಪ್ರಸರಣ (ಕಾಮಗಾರಿ ಮತ್ತು ನಿರ್ವಹಣೆ)/ಪ್ರಸರಣ/ಕಾಮಗಾರಿ ವೃತ್ತ ಕಛೇರಿಗಳು.
ಕವಿಪ್ರನಿನಿ.

ಮಾನ್ಯರೆ,

ವಿಷಯ :- ಕಾರ್ಮಿಕ ಆಯುಕ್ತರವರಿಂದ ನೋಂದಣಿ ಪ್ರಮಾಣ ಪತ್ರ ಪಡೆಯುವ ಬಗ್ಗೆ.

ಉಲ್ಲೇಖ:- ಕಾರ್ಮಿಕ ಆಯುಕ್ತರ ಸಭಾ ಸೂಚನಾ ಪತ್ರ ಸಂಖ್ಯೆ:ಐಡಿಎ/02/26/16-17
ದಿನಾಂಕ:14-09-2017.

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕವಿಪ್ರನಿನಿಯ ವ್ಯಾಪ್ತಿಯಲ್ಲಿ ವಿದ್ಯುತ್ ಉಪ ಸ್ಥಾವರಗಳ ನಿರ್ವಹಣೆಗೆ/ಇತರೆ ಸೇವೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಟೆಂಡರ್ ಮುಖಾಂತರ ಗುತ್ತಿಗೆ ಏಜೆನ್ಸಿ ಮೂಲಕ ಪಡೆಯಲು ನಿಗಮದಿಂದ ಕಾರ್ಯದೇಶ ನೀಡಲಾಗುತ್ತದೆ.

Contract Labour (Regulation and Abolition ) Act 1970 Rule 18(1) ಪ್ರಕಾರ ಹೊರ ಗುತ್ತಿಗೆ ಮೂಲಕ ಸೇವೆಯನ್ನು ಪಡೆಯುವಾಗ ಮೂಲ ಮಾಲೀಕರು Principal Employer Registration Ceritificate ನ್ನು ಕಾರ್ಮಿಕ ಇಲಾಖೆಯಿಂದ ಕಡ್ಡಾಯ ಪಡೆಯಬೇಕಾಗಿರುತ್ತದೆ.

ಆದರಂತೆ ತಮ್ಮ ವೃತ್ತ ಕಛೇರಿಗಳಲ್ಲಿ ಇನ್ನು ಮುಂದೆ ಹೊರ ಗುತ್ತಿಗೆ ಸೇವೆ ಪಡೆಯಲು ಕಡ್ಡಾಯವಾಗಿ ಅಯಾ ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಕಛೇರಿಯಲ್ಲಿ ನೋಂದಣಿ ಮಾಡಿ "Principal Employer Registration Ceritificate" ಪಡೆಯುವಂತೆ ಸೂಚಿಸಲಾಗಿದೆ. ಸದರಿ ನೋಂದಣಿ ಪತ್ರವನ್ನು ಪಡೆಯದಿದ್ದ ಪಕ್ಷದಲ್ಲಿ ಕಾರ್ಮಿಕ ಕಾನೂನಿನ ಉಲ್ಲಂಘನೆಯಾಗುವುದರಿಂದ ಈ ಕೂಡಲೇ ನೋಂದಾಯಿಸಲು ಕ್ರಮಕ್ಕೈಗೊಳುವಂತೆ ಸೂಚಿಸಲಾಗಿದೆ. ಹಾಗೂ ನೊಂದಾಯಿಸಿದ ಬಗ್ಗೆ ಕೈಗೊಂಡ ವರದಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ತಿಳಿಸಲಾಗಿದೆ.

ಮುಂದುವರೆದಂತೆ, ಸದರಿ ವಿಷಯದಲ್ಲಿ ನಿರ್ಲಕ್ಷಿಸಿದ್ದ ಪಕ್ಷದಲ್ಲಿ ನಿಗಮದ ವಿರುದ್ಧ ಬರಬಹುದಾದ ದಂಡ ಮತ್ತು ಇತರೆ ಆರ್ಥಿಕ ಹೊಣೆಗಾರಿಕೆಗೆ ಸಂಬಂಧಪಟ್ಟವರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ತಮ್ಮ ವಿಶ್ವಾಸಿ,

ನಿರ್ದೇಶಕರು(ಆ ಮತ್ತು ಮಾ.ಸಂ),
ಕವಿಪ್ರನಿನಿ

1. ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು/ ಮೈಸೂರು/ ಹಾಸನ/ ತುಮಕೂರು/ ಕಲಬುರಗಿ/ಬಾಗಲಕೋಟೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಅಧೀಕ್ಷಕ ಇಂಜಿನಿಯರ್(ಕಾಮಗಾರಿ), ಕವಿಪ್ರನಿನಿ ಕಾವೇರಿ ಭವನ ಬೆಂಗಳೂರು ರವರಿಗೆ ಕವಿಪ್ರನಿನಿ ನಿಗಮ ಕಛೇರಿಯನ್ನು ನೊಂದಣಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಸಲುವಾಗಿ.